ಮೆಹು ಮಾಮಿ ಕಣ್ಣೊರೆಸಿಕೊಳ್ಳುತ್ತ ಕುಳಿತಿದ್ದಳು. ಅನಾಮತ್ತಾಗಿ ಅವಳ ಕಿವಿಯಿಂದ ಪುಟ್ಟ ಬುಗುಡಿ ಕಳಚಿ ಎಡಪಕ್ಕಕ್ಕೆ ಬಿತ್ತು. ಅದು ತೀರಾ ಸಣ್ಣ ಗಾತ್ರದ್ದಾದುದರಿಂದ ಅಲ್ಲಿರುವ ಯಾರ ಗಮನಕ್ಕೂ ಆ ಬುಗುಡಿ ಬಂದಂತೆ ಕಾಣಲಿಲ್ಲ. ನಾನು ಮೆಹುಮಾಮಿಯನ್ನು ಸಮಾಧಾನಿಸಲೋ ಎಂಬಂತೆ ಸರಿದು ಹೋಗಿ, ಆಕೆಯನ್ನು ಹೇಗೆ ನೇವರಿಸಬೇಕೆಂದು ತಿಳಿಯದೇ ಆ ಬುಗುಡಿಯನ್ನೆತ್ತಿ ಮಾಮಿಯ ಮುಂದೆ ಹಿಡಿದೆ. ಅವಳದನ್ನು ಕಂಡು ಒಮ್ಮೆ ಕಿವಿ ಮುಟ್ಟಿಕೊಂಡು ಬುಗುಡಿಯನ್ನು ಪಡೆದಳು. ಅಷ್ಟಕ್ಕೇ ಅಜ್ಜಿಯ ಹಾರಾಟ ಶುರುವಾಯಿತು.

"ಕಟ್ಟಬ್ಯಾಡ್ವೇ. ಸಾವಿರ ಸರ್ತಿ ಹೇಳಾಯ್ತು. ಕಟ್ಟಬ್ಯಾಡ ಅದಕೆ ಅಂದ್ ಹೇಳಿ. ಅದಂತೂ ಸಣ್ಣ ಹುಡಗಿ, ನಿಂಗೂ ಗುತ್ತಾಗೂಲಾ ಅಲಾ ದರವೇಶಿ?" ಅಲ್ಲೇ ನಿಂತಿದ್ದ ಮಾಮ ನನ್ನ ರೆಟ್ಟೆ ಹಿಡಿದು ಹಿಂದಕ್ಕೆಳೆದ. ಅವನ ಬಿಗಿ ಹಿಡಿತವನ್ನು ನೋವಿನಿಂದ ಬಿಡಿಸಿಕೊಂಡೆ.

"ಆಯ್ತು, ಇದು ನಿನಗೆ ಬ್ಯಾಡ ಅಲ್ವೇ? ಎಲ್ಲಿಂದ ಬಂತು ಅಂದ್ ನೀ ಹೇಳಲಾರೆ ಅಲಾ? ಈ ದುಡ್ಡನ್ನ ನಾನೇ ಇಟ್‌ಕಂತೆ ಆಗೂದು?"

"ಅಯ್ಯೋ ಭಾವನೋರೇ, ಅದು... ಅದು ನಂದಲ್ಲ."

"ಇನ್ನ್ಯಾರದೇ? ಯಾರರೂ ಯಾಕೆ ಕೊಡೋರೇ ಇದನ್ನ ಮೂರು ಕಾಸಿನ ಹೆಣ್ಣಿನ ಕೂಡೆ?"

ಈ ಸರ್ತಿ ಸುಗಂಧಿ ಮಾಮಿ ಧಡಧಡನೆ ಎರಡು ಹೆಜ್ಜೆ ಮುಂದೆ ಸರಿದಳು.

"ರೀ, ಹೋಗ್ಲಿ ಬಿಟ್ಟಬಿಡಿ. ಅದರ ದುಡ್ಡು ಅದಕ್ ಕೊಟ್ಹಾಕಿ..."

"ನಿಂದೇನೇ ವಕಾಲತ್ತು?" ಈ ಬಾರಿ ಮಾಮನ ಧ್ವನಿ ತಾರಕಕ್ಕೇರಿತ್ತು.

"ನಿಂದೇನೇ ಈ ದುಡ್ಡು? ಏನು ನಡಸೇರಿ ಇಬ್ರೂ ಸೇರಿ? ನಿಮ್ ಗುಸುಗುಸು ನಂಗ್ ಗುತ್ತಾಗೂಲಾ ಅಂದ್ ತಿಳ್ದೇ?"

ಮಾಮನ ಹಾರಾಟಕ್ಕೆ ಸುಗಂಧಿ ಮಾಮಿ ಒಂದು ಹೆಜ್ಜೆ ಹಿಂದೆ ಸರಿದಳು. ಆದರೆ, ಏರಿದ್ದ ಮಾಮನ ಸಿಟ್ಟನ್ನು ಇಳಿಸಲು ಅದು ಫಲಕಾರಿಯಾಗಲಿಲ್ಲ.

